OS No. 146/2023.

**–:<u>ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲಿನ ಆದೇಶ</u>:–**

ಈ ದಾವೆಯನ್ನು ವಾದಿಯು, ಪ್ರತಿವಾದಿಯ ವಿರುದ್ಧ ಶಾಶ್ವತ ನಿರ್ಭಂದಕಾಜ್ಞೆ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ಜೊತೆಗೆ ಮಧ್ಯಂತರ ಅರ್ಜಿ ಸಂಖ್ಯೆ 3 ನ್ನು ಸಿಪಿಸಿ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿ ಪ್ರತಿವಾದಿಯು ಅಥವಾ ಅವರ ಕಡೆಯವರು ದಾವಾ ಸ್ಥಳದಲ್ಲಿರುವ ಕಾಲು ದಾರಿಯಲ್ಲಿ ವಾದಿಯು ತಿರುಗಾಟ ಮಾಡಲು, ಬಳಸಿ ಬರಲು ಯಾವುದೇ ರೀತಿಯಿಂದ ಆತಂಕಪಡಿಸದಂತೆ ತನ್ನ ಪರವಾಗಿ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವನ್ನು ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಮಧ್ಯಂತರ ಅರ್ಜಿ ಸಂಖ್ಯೆ3 ರ ಮೇಲಿನ ವಾದವನ್ನು ಆಲಿಸಲಾಯಿತು. ಮತ್ತು ಸದರಿ ದಾವೆಯಲ್ಲಿನ ದಾಖಲೆಗಳನ್ನು ಮತ್ತು ಪ್ರಮಾಣ ಪತ್ರವನ್ನು ಪರಿಶೀಲಿಸಲಾಯಿತು. ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ವಾದಿಯು ಹೂಡಿದ ಈ ದಾವೆಯು ಮೇಲ್ನೋಟಕ್ಕೆ ಸಮ್ಮತವಾದ ದಾವೆಯಾಗಿದೆ ಎಂದು ಕಂಡುಬರುತ್ತದೆ. ಒಂದು ವೇಳೆ, ಮಧ್ಯಂತರ ಅರ್ಜಿಯನ್ನು ತಿರಸ್ಕರಿಸಿದರೆ, ವಾದಿಯು ಪರಿಹಾರ ಪಡೆಯಲು ಮತ್ತೊಂದು ಪ್ರಕ್ರಿಯೆಯಲ್ಲಿ ಭಾಗಿಯಾಗುವ ಸಂಭವ ಉಂಟಾಗಬಹುದು, ಮತ್ತು ಕಛೇರಿಯಲ್ಲಿ ಪರಿಶೀಲಿಸಲಾಯಿತು, ಯಾವುದೇ ಎಚ್ಚರಿಕೆ ಅರ್ಜಿ (ಕೆವಿಯಟ್) ಇರುವುದಿಲ್ಲ. ಆದ್ದರಿಂದ ಈ ಮುಂದಿನಂತೆ ಆದೇಶಿಸುತ್ತೇನೆ.

OS No. 146/2023.

**ಆ ದೇ ಶ**

ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 3 ನ್ನು ಪುರಸ್ಕರಿಸಲಾಗಿದೆ.

ಪ್ರತಿವಾದಿಯು ಅಥವಾ ಅವರ ಕಡೆಯವರು ದಾವಾ ವಿಚಾರಣೆ ಮುಗಿಯುವವರೆಗೆ ದಾವಾ ಸ್ಥಳದಲ್ಲಿರುವ ಕಾಲು ದಾರಿಯಲ್ಲಿ ವಾದಿಯು ತಿರುಗಾಟ ಮಾಡಲು, ಬಳಸಿ ಬರಲು ಯಾವುದೇ ರೀತಿಯಿಂದ ಆತಂಕಪಡಿಸದಂತೆ ತಾತ್ಕಾಲಿಕವಾಗಿ ನಿರ್ಭಂಧಿಸಲಾಗಿದೆ.

ಪ್ರತಿವಾದಿಗೆ ಏಕಪಕ್ಷೀಯ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಪ್ರತಿ ಮತ್ತು ತುರ್ತು ನೋಟಿಸ್ ರವಾನಿಸಲು ಕಛೇರಿಗೆ ನಿರ್ದೇಶಿಸಲಾಗಿದೆ.

ಪ್ರತಿವಾದಿಗೆ ದಾವಾ ಸಮನ್ಸ್ ಹೊರಡಿಸಿರಿ.

ವಾದಿಯು ಸಿ.ಪಿ.ಸಿ. ಕ್ರಮಾದೇಶ 39 ನಿಯಮ 3(ಎ) ಮತ್ತು (ಬಿ) ನಿಯಮಗಳನ್ನು ಪರಿಪಾಲಿಸತಕ್ಕದ್ದು.

**ಮುಂದಿನ ವಿಚಾರಣೆ ದಿನಾಂಕ: 07.12.2023.**

SD/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾವರ.